ಮುಳುಗಿರುವಾಗ ಯಾರಾದರೂ ಬಂದು, 'ಯಕಾ ಯಕಾ! ಜಂಬಣ್ಣ ರಸ್ತೆಗೆ ಬಿದ್ದಾನ' ಎಂದರೆ, 'ಬಿದ್ದರ ಬೀಳಲಿ, ತಿಕ್ಕ. ಸತ್ತರೆ ಬಂದು ಹೇಳ್ರಿ' ಎನ್ನುತ್ತಿದ್ದಳು. ಕೊನೆಗೊಂದು ದಿನ ಸಾಕಾಗಿ, ಅವಳು ಮಕ್ಕಳೊಟ್ಟಿಗೆ ಸೇರಿಕೊಂಡು ಗಂಡನ ಕಾಲನ್ನು ತಿರುಚಿ, ಮನೆಯಲ್ಲಿಟ್ಟು ಸಾಯುವತನ ಕೂಳುಹಾಕಿದಳು. ಸತ್ತ ದಿನ ದಿಕ್ಕೆಟ್ಟಂತೆ ಮಂಕಾಗಿದ್ದಳು. ದಿನಕಾರ್ಯ ಮುಗಿಸಿಕೊಂಡು ಬಂದು ನಮ್ಮಲ್ಲಿ ಕೊನೇ ಕಂತಿನ ರೋದನ ಮಾಡಿದಳು. ಬಳಿಕ ಕಂಬನಿ ತೊಡೆದುಕೊಂಡು ಸಿಂಬಳ ಸೀಟಿ, ನಿಡಿದಾದ ಉಸಿರುಬಿಡುತ್ತಾ, 'ಯಕ್ಕಾ, ಎದಿ ಮ್ಯಾಲಿನ ಕೊಲ್ಲಬಂಡೆ ತಗದಂಗಾತು' ಎಂದಳು. ಮಕ್ಕಳನ್ನು ಬೆಳೆಸಿ ಹೊಸ ಬದುಕನ್ನು ಕಟ್ಟಿಕೊಂಡಳು. ಚಳವಳಿಗಾರರೊಬ್ಬರಿಗೆ ತಾಯಮ್ಮನ ಕತೆ ಹೇಳಿದೆ. ಅವರು ಪ್ರತಿಯಾಗಿ ಅವರು ತಮ್ಮ ಬೀದಿಯ ಪೌರಕಾರ್ಮಿಕಳ ಕತೆ ಹೇಳಿದರು. ಬೀದಿಗುಡಿಸುವ ಆಕೆ ಗಂಡಸತ್ತನೆಂದು ರಜೆ ಹೋದವಳು ತಿಂಗಳ ನಂತರ ಮರಳಿದಳಂತೆ. ಚಳವಳಿಗಾರರು 'ಸಣ್ಣವಯಸ್ಸಿಗೇ ಗಂಡನ್ನ ಕಳಕೊಂಡ್ಯಲ್ಲಮ್ಮಾ' ಎಂದು ಲೋಕರೂಢಿಯಂತೆ ಸಂತಾಪ ಸೂಚಿಸಿದರಂತೆ. ಅದಕ್ಕೆ ಆಕೆ, 'ಅಯ್ಯೋ ಸುಮ್ಕಿರು ಸ್ವಾಮಿ, ಆಯಪ್ಪ ತೀರಕೊಂಡ ಮೇಲೆ ಕೊಂಚ ಡೆವಲಪ್ ಆಗಿದೀನಿ' ಎಂದು ಬದಲು ಕೊಟ್ಟಳಂತೆ. ಗಂಡ ಗತಿಸಿದ ದುಗುಡದೊಳಗೂ ವಿಚಿತ್ರ ನೆಮ್ಮದಿ ಅನುಭವಿಸುವ ಈ ಪರಿಯಲ್ಲಿ ಯಾವೆಲ್ಲ ಸಾಮಾಜಿಕ ಸತ್ಯಗಳು ಅಡಗಿವೆ?

ಒಂದು ದೃಶ್ಯವಂತೂ ಕಣ್ಣಿಗೆ ಕಟ್ಟಿದಂತಿದೆ. ನಾನೂ–ಬಾನು ಹಂಪಿ ಎಕ್ಸ್‌ಪ್ರೆಸ್ ಅನ್ನು ಹಿಡಿಯಲು ಬೆಂಗಳೂರ ಸ್ಟೇಶನ್ನಿಗೆ ಬಂದಾಗ ಪ್ಲಾಟ್‌ಫಾರಂ ಕಾಲಿಡಲಿಂಬಿಲ್ಲದೆ ಗಿಜಿಗುಡುತಿತ್ತು. ಛಾವಣಿ ಮೇಲಿಂದ ಇಳಿದುಬರುವ ಮೆಟ್ಟಿಲ ಮೇಲೇ ಕುಳಿತೆವು. ಒಬ್ಬ ಬಡಕಲು ತರುಣ, ಮೆಟ್ಟಲಿಳಿಯುತ್ತ ಆಯತಪ್ಪಿ ದಢಾರನೆ ಬಿದ್ದು ಮೂರುಸುತ್ತು ಉರುಳಿದನು. ಧಡ್ಡನೆದ್ದು ಹೋಗಿ ತಲೆಗೆ ಕೈಗೊಟ್ಟು ಎಬ್ಬಿಸಿದೆ. ಬಾನು ನೀರು ಹಣಿಸಿದಳು. ಬಾಯಿಂದ ವಾಸನೆ ಹೊಮ್ಮುತ್ತಿತ್ತು. ಇವನ ಕಡೆಯವರ್‍ಯಾರು ಎಂದು ತಿರುಗಿ ನೋಡಲು, ಅವನ ಹೆಂಡತಿ ಹೆಗಲಲ್ಲಿ ಮಲಗಿದ್ದ ಕೂಸನ್ನೂ ಕೈಯಲ್ಲಿ ಭಾರವಾದ ಬ್ಯಾಗನ್ನೂ ಹೊತ್ತು ಭಾವನಾರತಹಿತ ಕಂಗಳಿಂದ ನೋಡುತ್ತಿದ್ದಳು. ತಾರುಣ್ಯದಲ್ಲೇ ಮುಪ್ಪಾವರಿಸಿತ್ತು. ಆಕೆಯ ಮುಖದಲ್ಲಿದ್ದ ಕಠೋರ ನಿರ್ಲಿಪ್ತತೆಗೆ ನಡುಗಿಹೋದೆ. 'ತಲಿಗೆ ಪೆಟ್ಟುಗಿಟ್ಟು ಆಗೀತೇನೋ, ನೋಡವ್ವ' ಎಂದೆ. 'ಸತ್ತರೆ ಸಾಯಲಿ ಬಿಡುಸಾ. ಅವನ ದೆಸಿಂದ ಹೈರಾಣಾಗೀನಿ' ಎಂದಳು. ಗಲಭೆಗೆ ಎಚ್ಚೆತ್ತ ಕೂಸು ಅಪ್ಪನನ್ನು ಪಿಳಿಪಿಳಿ ನೋಡುತ್ತಿತ್ತು. ಏನೆಲ್ಲ ಕಣಸು ತುಂಬಿಕೊಂಡು ಬಾಳಿಗೆ ಪ್ರವೇಶಿಸಿದ ಹೆಣ್ಣೊಬ್ಬಳ ಭವಿಷ್ಯ ಮುಟ್ಟಿರುವ ದುರ್ಗತಿಗೆ ಆತನ ಬೀಳುವಿಕೆ ಪ್ರತೀಕವಾಗಿತ್ತು. ಕುಡಿತವಿರೋಧಿ ಕಾರ್ಯಕ್ರಮಗಳು ಯಾಕೆ ಮಹಿಳಾ ಚಳವಳಿಗಳಾಗುತ್ತದೆ ಎನ್ನುವುದಕ್ಕೆ ಹೆಚ್ಚಿನ ವಿವರಣೆ ಬೇಕೇ?

ಈಗೀಗ ಹಳ್ಳಿಗಳಲ್ಲಿ ಕುಡುಕರು ಆಬಾಲವೃದ್ಧರಾದಿಯಾಗಿ ಹೆಚ್ಚುಗೊಂಡಿದ್ದಾರೆ. ಚುನಾವಣೆ ಬಂತೆಂದರೆ ಇವರ ಸಂಖ್ಯೆ ಏರಿಕೆಯಾಗುತ್ತದೆ. ಕೆಲವು ಮಹನೀಯರು ಮತದಾನದ ಮುನ್ನಾದಿನ ಏರಿಸಿ ಮಲಗಿದರೆ ಏಳುವುದು ಫಲಿತಾಂಶ ಹೊರಬಿದ್ದ ಬಳಿಕವೇ. ದುರ್ಗಮ್ಮನ ಜಾತ್ರೆಗೆಂದು ಗ್ರಾಮವೊಂದಕ್ಕೆ ಹೋಗಿದ್ದೆ. ನನ್ನನ್ನು ಇಳಿಸಿಕೊಂಡಿದ್ದ ಮನೆಯವರು ಬಾಡೂಟ ಬಡಿಸುವ ಮೊದಲು, 'ಸ್ವಾಮೀ, ಆನಂದ ಮನೇಲದೆ. ವಸಿ ತಗೋತೀರಾ?' ಎಂದರು. ಗೋಣಿಚೀಲದ ತುಂಬ ವಿವಿಧ ಬ್ರಾಂಡಿನ ಸೀಸೆಗಳಿದ್ದವು. 'ಎಲ್ಲಿಂದ ತಂದಿರಿ ಇಷ್ಟೊಂದು' ಎಂದೆ. 'ಎಲೆಕ್ಷನ್ ಅಲ್ಲವುರಾ? ಕೊಟ್ಟವರೆ' ಎಂದರು. ನಮ್ಮ ಪ್ರಜಾಪ್ರಭುತ್ವದ ಬುನಾದಿಯಲ್ಲಿ ಸೀರೆ,